ಆ ಕ್ಷಣಕ್ಕೆ ಹಾರ್ಟ್‌ಗೆ ಮಂಡೆ ಕೆಟ್ಟು ಹಾಳಾಗೋದು ಅಂದುಕೊಂಡ್ಯಾ? ಇಲ್ಲ... ವರ್ಷಗಳ ಕಾಲ ರಕ್ತನಾಳಗಳೊಳಗೆ ಬೆಳೆಯುತ್ತಲೇ ಹೋದ ಅನಾರೋಗ್ಯವೊಂದರ ಅಂತಿಮ ಪರಿಣಾಮ ಅದು!''

ಮಂದಾಳಿಗೆ ಅರ್ಥವಾಗುವಂತೆ ಬಿಡಿಸಿ ಹೇಳಿದೆ. ಆದರೂ ಮಂದಾಳಿಗೆ ತೃಪ್ತಿಯಾದಂತಿರಲಿಲ್ಲ.

''ಆಯ್ತಪ್ಪಾ, ನಿನ್ನ ದಾರೀಲೇ ಬರ್ತೀನಿ. ಅನುವಂಶೀಯ ಅನ್ನೋದಕ್ಕೆ ಅಪ್ಪನ ತಂದೆ ತಾಯಿಗ್ಯಾರಿಗೂ ಬಿಪಿ ಇರಲಿಲ್ಲ. ನಾನೇ ನೋಡಿದ್ದೆನಲ್ಲಾ? ಇನ್ನು ಆಹಾರ ಕ್ರಮ ಅನ್ನೋದಾದರೆ, ಫಾಸ್ಟ್ ಫುಡ್, ಬಿಡಿ ಸಿಗ್ರೇಟೆಲ್ಲ ಬಿಡು, ಕನಿಷ್ಠ ಎಲೆ ಅಡಿಕೆ ಮೆಲ್ಲೋ ಚಟವೂ ಅವನಿಗರಿಲಿಲ್ಲ. ಗ್ಯಾಸ್ಟ್ರಿಕ್ ಹೊಟ್ಟೆ ನೋವಿದ್ದುದರಿಂದ ಕಳೆದ ಇಪ್ಪತ್ತೈದು ವರ್ಷದಿಂದಲೂ ಅವನು ಅಪ್ಪಟ ಪಥ್ಯದ ಊಟ ಪಾಲಿಸುತ್ತಿದ್ದ. ಇನ್ನು ಸ್ಟ್ರೆಸ್ ಅನ್ನೋದಾದರೆ ದಿನನಿತ್ಯದ ಮಾಮೂಲು ಮಂಡೆಬಿಸಿಗಳ ಹೊರತಾಗಿ, ನರದೊಳಗೆ ರಕ್ತ ಕಟ್ಟಿಸುವಷ್ಟು ತಲೆಬೇನೆ ಅವನಿಗೇನೂ ಇರಲಿಲ್ಲ. ಹೀಗಿರುವಾಗ ಅವನಿಗೆ ಬಿಪಿ ಬಂದೊದಗಿದ್ದಾದರೂ ಹೇಗೆ?''



ಅವರ ಜೀವದೊಳಗೆ ಅವರಿಗೇನೇನು ಬೇನೆಯಾಗುತ್ತಿತ್ತೋ ನಮಗೇನು ಗೊತ್ತು ಮಂದಾ? ದೊಡ್ಡವರು ತಮ್ಮ ಸಮಸ್ಯೆಗಳನ್ನೆಲ್ಲಾ ಹೇಳಿಕೊಳ್ಳುತ್ತಾರಾ? ಎಂದು ಕೇಳಬೇಕೆನ್ನುವಷ್ಟರಲ್ಲೇ ಮಂದಾಳ ಮೊಬೈಲು ರಿಂಗಾಯಿತು. ಎರಡು ನಿಮಿಷ ಮಾತಾಡಿ ಫೋನಿಟ್ಟವಳು ಅಮ್ಮನ ಕ್ವಾರೆಂಟೈನ್ ತೆಗೆದಿದ್ದಾರಂತೆ. ಈಗಲೇ ಹೊರಟು ಬೆಳಗ್ಗೆ ಬರುತ್ತಾಳಂತೆ ಎಂದಳು.

ಹೆಂಡತಿಯ ಆಗಮನ ಮಾವನಲ್ಲಿ, ಅಮ್ಮನ ಬರುವು ಮಂದಾಳಲ್ಲಿ ಕೊಂಚ ಚೇತರಿಕೆಗೆ ಕಾರಣವಾಗಬಹುದು ಎಂದುಕೊಂಡು ನಿಟ್ಟುಸಿರಿಟ್ಟು ಹೊರಡಲೆಂದು ಎದ್ದಾಗ ನನ್ನ ಕೈಹಿಡಿದ ಮಂದಾ ಎಳೆದು ಕೂರಿಸಿದಳು.

''ನೀನು ಬೈಯೋದಿಲ್ಲಾಂದ್ರೆ... ನನಗೆ ಇನ್ನೊಂದೇ ಒಂದು ಅನುಮಾನವಿದೆ ಶರತ್. ಬೈತೀಯಾಂದ್ರೂ ಹೇಳ್ತೀನಿ. ಯಾಕಂದ್ರೆ ಇದನ್ನೂ ನೀನೇ ಕಂಡುಹಿಡಿಯಬೇಕು. ನನ್ನ ಮೇಲಿನ ಸೇಡಿಗೆ ಅಕ್ಕ ಭಾವ ಏನಾದರೂ ಮಾಟ ಗೀಟ ಮಾಡಿಸಿರಬಹುದಾ?''

ಬೇರ್‍ಯಾವುದೇ ಸಮಯದಲ್ಲಿ ಮಂದಾ ಈ ಮಾತನ್ನಾಡಿದ್ದರೆ ನಾನು ಬೈದುಬಿಡುತ್ತಿದ್ದೆ. ಆದರೆ ಈಗ, ಖುಷಿಯ ಹುಲ್ಲುಗಾವಲಿನಲ್ಲಿ ಕಷ್ಟದ ಮಟ್ಟೆಯೊಂದು ಹಠಾತ್ತನೆ ಬೆಳೆದು ನಿಂತಿರುವ ಈ ಅನಿರೀಕ್ಷಿತ ಸಮಯದಲ್ಲಿ ಅವಳ ಮಾತನ್ನು ತಳ್ಳಿಹಾಕುವುದು ನನಗೆ ಸಾಧ್ಯವಾಗಲಿಲ್ಲ. ಒಂದು ಕಾಲದಲ್ಲಿ ಮಂದಾಳಿಗೆ ತಂದೆ ತಾಯಿಯಂತಿದ್ದು, ಉದ್ಯೋಗಕ್ಕೆಂದು ಪೇಟೆ ಸೇರಿದ ಅವಳನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡಿದ್ದರು ಅವಳ ಕಸಿನ್ ಅಕ್ಕ ಹಾಗೂ ಭಾವ. ಆದರೆ, ಕೆಲವೇ ವರ್ಷಗಳಲ್ಲಿ ಅದೇನಾಯಿತೋ ಏನೋ? ಇದ್ದಕ್ಕಿದ್ದಂತೆ ಅವಳ ಮೇಲೆ ಕಳ್ಳತನದ ಅಪವಾದ ಹೊರೆಸಿ ರಂಪಾಟ ಮಾಡಿಬಿಟ್ಟಿದ್ದರು. ನಿರಪರಾಧಿ ಮಂದಾಳಿಗೆ ಹಾನಿಯೆಸಗುವಲ್ಲಿ ಅವರು ಸಫಲರಾಗಿಲ್ಲವಾದರೂ ಅವಳ ಮೇಲೆ ಮುಗಿಯದ ದ್ವೇಷವೊಂದು ಅವರಲ್ಲಿ ಹೊತ್ತಿಕೊಂಡಿತ್ತು. ಅದೇ ದ್ವೇಷಕ್ಕೆ ಅವರೇನಾದರೂ